ಎನ್ನುವವನ ಹೆಸರು ಈ ಕಟ್ಟಡಕ್ಕೆ ಅಂಟಿಕೊಂಡಿತೇ ಎನ್ನುವುದು ಒಂದು ಊಹೆಯಾದರೆ, 'ಬಿಗ್' ಯಾರು ಎನ್ನುವ ಪ್ರಶ್ನೆ ಎದುರಾಗುತ್ತದೆ. ಆ ಕಾರಣಕ್ಕೆ ಇಂಗ್ಲಿಷರು ಹೆವಿ ವೇಟ್ ಬಾಕ್ಸಿಂಗ್ ಚಾಂಪಿಯನ್ ಬೆಂಜಮಿನ್ ಕಾಂಟ್‌ನದಿರಬಹುದು ಎಂದು ಹೇಳುವವರೂ ಇದ್ದಾರೆ. ಮುಖಕ್ಕಿಂತ ಮೂಗುತಿ ದೊಡ್ಡದು ಎನ್ನುವ ರೀತಿಯಲ್ಲಿ ಬಿಗ್ ಬೆನ್ ಅನ್ನು ಹೊತ್ತಿರುವ ವೆಸ್ಟ್‌ಮಿನ್‌ಸ್ಟರ್ ಅರಮನೆಗಿಂತಲೂ ಕೆಲವೊಮ್ಮೆ ಬಿಗ್ ಬೆನ್ ಹೆಚ್ಚು ಸೆಲೆಬ್ರೇಟ್ ಆಗುವುದೂ ಇದೆ.

ಬಿಗ್ ಬೆನ್ ಅನ್ನು ಹೊತ್ತ ಬುರುಜು ಅಥವಾ ಬುರುಜಿಗೆ ಕ್ಲಾಕ್ ಟವರ್ ಎನ್ನುವ ಹೆಸರಿತ್ತು. ಆದರೆ ಇಂಗ್ಲೆಂಡ್ ರಾಣಿ ಎರಡನೇ ಎಲಿಝಬೆತ್‌ಳ ವಜ್ರ ಮಹೋತ್ಸವ 2012ರಲ್ಲಿ ನಡೆದಾಗ ಇದಕ್ಕೆ 'ಎಲಿಝಬೆತ್ ಟವರ್' ಎಂದು ಮರು ನಾಮಕರಣ ಮಾಡಲಾಯಿತು. 1987ರಿಂದ ಈ ಬಿಗ್ ಬೆನ್ ಅನ್ನು ಯುನೆಸ್ಕೊ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ; ವಿಶ್ವ ಪಾರಂಪರಿಕ ತಾಣ ಎಂದು ಗುರುತಿಸಲಾಗಿದೆ.

## ಬಿಗ್ ಬೆನ್ ಈಗ ದೊಡ್ಡ ಗಡಿಯಾರವಲ್ಲ

ಬಿಗ್ ಬೆನ್ ಅಥವಾ ಗ್ರೇಟ್ ಬೆಲ್ ಇಡೀ ಪ್ರಪಂಚದಲ್ಲಿ ಅತಿದೊಡ್ಡ ಗಡಿಯಾರ ಸಂಕೀರ್ಣವಾಗಿ ಉಳಿದಿದ್ದು ಬರೇ 23 ವರ್ಷ. 1881ರಲ್ಲಿ ಲಂಡನ್ನಿನ ಸೇಂಟ್ ಪಾಲ್ ಕೆಥೆಡ್ರಿಲ್ 16.75 ಟನ್ ತೂಕದ ಗಡಿಯಾರವನ್ನು ಸ್ಥಾಪಿಸಿತು. ಅಮೆರಿಕದ ನ್ಯೂಯಾರ್ಕ್ ಮೆಟ್ರೊಪಾಲಿಟನ್ ಲೈಫ್ ಇನ್ಶೂರೆನ್ಸ್ ಕಟ್ಟಡದಲ್ಲಿರುವ ಮತ್ತೊಂದು ಗಡಿಯಾರವೂ ಬಹಳ ದೊಡ್ಡದು. ಇದರ ವ್ಯಾಸ 26 ಅಡಿ 6 ಇಂಚು.

ದೊಡ್ಡ ಗಡಿಯಾರಗಳಿಗೆಲ್ಲ ಸ್ಪರ್ಧೆ ನೀಡುವಂತಿರುವ ಮೆಕ್ಕಾದ ಅಬ್ರಜ್ ಅಲ್ ಬೇಟ್ ಎನ್ನುವ 700 ಅಡಿ ಬುರುಜಿನಲ್ಲಿ ಇರುವ ಗಡಿಯಾರದ ವ್ಯಾಸ 151 ಅಡಿ. ರಷ್ಯಾದ ಕ್ರೆಮ್ಲಿನ್‌ನಲ್ಲಿ ಕೂಡ 'ಕ್ರೆಮ್ಲಿನ್ ಕ್ಲಾಕ್' ಎನ್ನುವ ಗಡಿಯಾರ ಸ್ಪಾಸ್ಕಾಯ ಬುರುಜಿನಲ್ಲಿದೆ. ಆದರೆ ಇದು ಸ್ವಲ್ಪ ಸಣ್ಣ ಗಡಿಯಾರ. ಇದರ ವ್ಯಾಸ 20 ಅಡಿಗಳಿಗೆ ಮಿತಗೊಂಡರೆ, ಬುರುಜಿನ ಎತ್ತರ 232 ಅಡಿಗಳು.

ಗಡಿಯಾರದ ಸ್ಮಾರಕಗಳನ್ನು ಶುರುಮಾಡಿದ ಸಂಸ್ಕೃತಿಯ ಕೀರ್ತಿ ಇಂಗ್ಲೆಂಡಿಗೆ ಸೇರುತ್ತದೆ. 1970ರಲ್ಲಿ 'ಗ್ರೇಡ್ 1' ಲಿಸ್ಟ್‌ಗೆ ಬಿಗ್ ಬೆನ್ ಅನ್ನು ಸೇರಿಸಲಾಯ್ತು. ಅಂದರೆ, ಇಂಗ್ಲೆಂಡಿನಲ್ಲಿ ಬಿಗ್ ಬೆನ್‌ಗೆ ಅತಿ ವಿಶೇಷ ಮತ್ತು ಆಸಕ್ತಿದಾಯಕ ಕಟ್ಟಡ ಭಾಗವೆನ್ನುವ ಅಧಿಕೃತ ವಿಶೇಷಣ ಸಂದಿತು.

## ಎಡರು ತೊಡರುಗಳ ನಡುವೆ...

'ಡೆವಿಲ್ ಈಸ್ ಇನ್ ದಿ ಡೀಟೈಲ್ಸ್' (ವಿವರಗಳಲ್ಲಿಯೇ ನಿಜವಾದ ಪಿಶಾಚಿಯಿರುವುದು) ಎನ್ನುವ ಆಂಗ್ಲ ನಾಣ್ಣುಡಿಯಂತೆ ಬಿಗ್ ಬೆನ್ ಇತಿಹಾಸದಲ್ಲಿ ಅದರ ಹಲವು ಹುಳುಕುಗಳೂ ಇವೆ.

ಪ್ರಪಂಚದಲ್ಲಿಯೇ ದೊಡ್ಡ ಗಡಿಯಾರ ಮತ್ತು ಗ್ರೇಟ್ ಬೆಲ್ ಎನ್ನುವ ಗಂಟೆಯನ್ನು ಮೊದಲ



ಗಡಿಯಾರದ ಸ್ವಚ್ಛತಾ ಕಾರ್ಯ ನಡೆಯುವುದು ಹೀಗೆ... ಚಿತ್ರಕೃಪೆ: ವಿಕಿಕಾಮನ್ಸ್

ಬಾರಿಗೆ ತಯಾರಿಸುವಾಗ ಈ ಗುತ್ತಿಗೆಯನ್ನು ಹೊತ್ತಿದ್ದ 'ಜಾನ್ ವಾರ್ನರ್ ಸನ್' ಎನ್ನುವ ಸಂಸ್ಥೆ ಬಹಳ ಮಹತ್ವಾಕಾಂಕ್ಷೆ ಹೊತ್ತಿತ್ತು. ಈಗಿರುವ ಬಿಗ್ ಬೆನ್‌ಗಿಂತಲೂ ಹೆಚ್ಚು ತೂಕದ 16 ಟನ್‌ಗಳ ಗಂಟೆಯನ್ನು ತಯಾರಿಸಿತು. ಕೆಲಸ ಮುಗಿದು ಇದರ ಕಾರ್ಯಕ್ಷಮತೆ ಪರೀಕ್ಷಿಸಲು ನಡೆಸಿದ ಮೊದಲ ಪ್ರಯತ್ನದಲ್ಲೇ ದುರಸ್ತಿ ಮಾಡಲಾಗದಂತೆ ಈ ಗಂಟೆ ಬಿರುಕು ಬಿಟ್ಟು ಒಡೆದುಹೋಯಿತು. ಶಕುನ, ಅಪಶಕುನ ಇತ್ಯಾದಿಗಳಲ್ಲಿ ನಂಬಿಕೆಯಿಡದ ಬ್ರಿಟಿಷರು ಪ್ರಯತ್ನದಲ್ಲಿ ಮಾತ್ರವೇ ನಂಬಿಕೆಯಿಡುವ ಜನ. ಹಾಗಾಗಿ, ಇನ್ನೊಂದು ಗಂಟೆ ತಯಾರಿಸಿದರು. ಸ್ವಲ್ಪ ಸಣ್ಣ ಗಾತ್ರದ್ದು. ಇದೇ ಗ್ರೇಟ್ ಬೆಲ್. ಇದು ಪರೀಕ್ಷೆಯಲ್ಲಿ ತೇರ್ಗಡೆಯೂ ಆಯ್ತು. ಇದನ್ನು 16 ಕುದುರೆ ಕಟ್ಟಿದ ವಾಹನದಲ್ಲಿ ಈ ಟವರಿಗೆ ಎಳೆದುಕೊಂಡು ಹೋಗಬೇಕಾಗಿತ್ತು.

13.6 ಟನ್ ತೂಕದ ಈ ಬೆಲ್ ಅನ್ನು 200 ಅಡಿ ದೂರ ಸಾಗಿಸಲು 18 ಗಂಟೆಗಳ ಸಮಯ ಹಿಡಿಯಿತು. ಸಹಸ್ರಾರು ಜನರು ಇಕ್ಕೆಲಗಳಲ್ಲಿ ನಿಂತು ಕೂಗುತ್ತ ಪ್ರೋತ್ಸಾಹಿಸಿದರು. ಇದು ಮೊದಲು ಗಂಟೆ ಬಾರಿಸಿದ್ದು ಜುಲೈ 1859ರಲ್ಲಿ. ಮುಂದಿನ ದಿನಗಳಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ತೂಕದ ಸುತ್ತಿಗೆ ಬಳಸಿದ ಕಾರಣ ಈ ಗಂಟೆ ಕೂಡ ಬಿರುಕುಬಿಟ್ಟಿತು. ಮೂರು ವರ್ಷಗಳ ಕಾಲ ಇದು ಮೊಳಗಲೇ ಇಲ್ಲ.

ಒಡೆದು ಹೋದ ಚೌಕಾಕೃತಿಯ ಭಾಗವನ್ನು ಗಂಟೆಯಿಂದ ಬೇರ್ಪಡಿಸಿ ತೆಗೆದರು. ಗಂಟೆಗೆ 1/8ನೇ ತಿರುವನ್ನು ನೀಡಲಾಯ್ತು. ಈ ಕಾರಣ ಗಂಟೆಯ ಸುತ್ತಿಗೆ (ಇಂಗ್ಲಿಷರು ಕರೆಯುವ ಹ್ಯಾಮರ್) ಒಡೆದ ಭಾಗವನ್ನು ಬಿಟ್ಟು ಬೇರೆಡೆ ಬಾರಿಸುವಂತೆ ಅಳವಡಿಸಲಾಯ್ತು. ಇವತ್ತಿಗೂ ಈ ಮುಕ್ಕಾದ ಗಂಟೆಯ ನಾದವನ್ನೇ ನಾವು ಬಿಗ್ ಬೆನ್ ನಿನಾದವೆಂದು ಸವಿಯುವುದು. ಈಗಿನ ಶಬ್ದ ಹಿಂದಿನ ಶಬ್ದಕ್ಕಿಂತ ಬಹಳ ಬೇರೆ ಎಂದು ಹೇಳುವವರೂ ಇದ್ದಾರೆ.

1959ರಲ್ಲಿ ಸ್ಥಾಪಿತವಾದ ಗಡಿಯಾರ 3 ವರ್ಷ ನಿಂತದ್ದು ಒಡಕಿನ ಕಾರಣ. ಆ ನಂತರ 1877 ಮತ್ತು 1900ರಲ್ಲಿ ಭಾರೀ ಹಿಮ ಬಿದ್ದ ಕಾರಣ ಮತ್ತೆ ಕೆಟ್ಟುಹೋಯಿತು. 1916ರಲ್ಲಿ ಪ್ರಪಂಚದ ಮೊದಲ ಮಹಾಯುದ್ಧದ ಕಾರಣ 2 ವರ್ಷಗಳ ಕಾಲ ಇದನ್ನು ನಿಲ್ಲಿಸಲಾಯಿತು. ನಂತರ 22 ಬಾರಿ ದುರಸ್ತಿ ಕಾರ್ಯಕ್ಕಾಗಿ ಗಡಿಯಾರ ನಿಂತಿದೆ. 21 ಆಗಸ್ಟ್ 2017 ರಿಂದ 5 ವರ್ಷಗಳ ಕಾಲ ಗಡಿಯಾರವನ್ನು ನಿಲ್ಲಿಸಲಾಗಿತ್ತು. 2020ಕ್ಕೆ ತಾತ್ಕಾಲಿಕವಾಗಿ ನಡೆದು ನಿಂತ ನಂತರ ಮತ್ತೂ ಆಧುನೀಕರಣಗೊಂಡಿದೆ.

ಲಂಡನ್ನಿನಲ್ಲಿ ನಡೆವ ಹೊಸ ವರ್ಷದ ಹರ್ಷಾಚರಣೆ ಶುರುವಾಗುವುದೇ ಬಿಗ್ ಬೆನ್ ನಾದದ ಮೂಲಕ. ಹಾಗೆಯೇ, ಪ್ರಪಂಚ ಯುದ್ಧದಲ್ಲಿ ದೇಶಕ್ಕಾಗಿ ಹೋರಾಡಿ ಮಡಿದ ಜನರ ಸ್ಮರಣೆಯ 'ರಿಮೆಂಬರೆನ್ಸ್ ಡೇ'ಯನ್ನು ದಾಖಲಿಸಲು ಪ್ರತಿ ವರ್ಷದ 11ನೇ ತಿಂಗಳು, 11ನೇ ದಿನ ಮತ್ತು 11ನೇ ಗಂಟೆ ಬಿಗ್ ಬೆನ್ 2 ನಿಮಿಷಗಳ ಮೌನಾಚರಣೆಗೆ ಆದೇಶ ನೀಡುತ್ತದೆ. ಈ ವರ್ಷ ಇದೇ ಸಂದರ್ಭಕ್ಕೆ ನಾಲ್ಕು ದಿನಗಳ ತಾಲೀಮು ನಡೆಸಿದ ನಂತರ ನವೆಂಬರ್ 13ರಂದು ಮತ್ತೆ ಗಡಿಯಾರ ಮೊದಲಿನಂತೆ ಗಂಟೆ ಬಾರಿಸುತ್ತ ಸಕ್ರಿಯಗೊಂಡಿದೆ.

ಐದು ವರ್ಷಗಳ ನಂತರ ಬಿಗ್ ಬೆನ್ ಗಂಟೆ ಬಾರಿಸಿದ್ದನ್ನು ಎಲ್ಲ ಮಾಧ್ಯಮಗಳೂ ಬಿತ್ತರಿಸಿದವು. ಇದನ್ನು ದುರಸ್ತಿಗೊಳಿಸಿದ ಎಂಜಿನಿಯರ್, ಪ್ರತಿಕೂಲ ಹವಾಮಾನದಲ್ಲಿ ಇದು 2 ಸೆಕೆಂಡುಗಳ ವ್ಯತ್ಯಾಸ ತೋರಿಸಬಹುದು ಎಂದು ಮುನ್ನೆಚರಿಕೆ ಕೊಟ್ಟಿದ್ದಾನೆ. ಇದೀಗ ಈ ಬುರುಜಿನಲ್ಲಿ ಒಂದು ಲಿಫ್ಟನ್ನು ಕೂಡ ಅಳವಡಿಸಿದ್ದಾರೆ.

ಪ್ರತಿದಿನ ಪ್ರತಿ ಹದಿನೈದು ನಿಮಿಷಕ್ಕೊಮ್ಮೆ ಬಿಗ್ ಬೆನ್ ಸಣ್ಣದಾಗಿ ನಾದ ಹೊರಡಿಸುತ್ತದೆ. ಗಂಟೆಗಳನ್ನು ಬಿತ್ತರಿಸಲು ಸಂಗೀತ ನುಡಿಸುವುದನ್ನು ಕೇಳಲು ಪ್ರವಾಸಿಗರು, ಇತರೆ ಜನರು ಹಂಬಲಿಸಿ ಕಾಯುತ್ತ ನಿಲ್ಲುತ್ತಾರೆ. ವೆಸ್ಟ್‌ಮಿನ್‌ಸ್ಟರ್ ಪ್ಯಾಲೇಸ್‌ನ ನಾಲ್ಕು ದಿಕ್ಕುಗಳಲ್ಲೂ ಬಿಗ್ ಬೆನ್ ಗಂಟೆಯ ನಾದವನ್ನು ಎಲೆಕ್ಟ್ರಾನಿಕ್ ಚೈಮ್‌ಗಳ ಮೂಲಕ ಬಿತ್ತರಿಸಲಾಗುತ್ತದೆ.

ಇವೇ ಬೆಲ್‌ಗಳು ರಾಜಮನೆತನದವರ ಶವಸಂಸ್ಕಾರದ ದಿನಗಳಂದು ಮೂರು ಬಾರಿ ಮೊಳಗಿವೆ. 1910ರಲ್ಲಿ ಮೂರನೇ ಎಡ್ವರ್ಡ್‌ಗಾಗಿ ಆತನ ವಯಸ್ಸನ್ನು ಹೇಳುತ್ತ 68 ಬಾರಿ ಬಾರಿಸಿದರೆ, 1936ರಲ್ಲಿ ಕಿಂಗ್ ಜಾರ್ಜ್‌ಗಾಗಿ 70 ಬಾರಿ, ಮತ್ತು 1952ರಲ್ಲಿ 56 ಬಾರಿ ಹೊಡೆದುಕೊಂಡು ಈ ರಾಜರು ಕಳೆದ ಪ್ರತಿ ವರ್ಷವನ್ನು ಆಚರಿಸಿದೆ. ಆದರೆ 2022ರ ಸೆಪ್ಟೆಂಬರ್ 9ನೇ ತಾರೀಕು, ಶುಕ್ರವಾರದ ಮಧ್ಯಾಹ್ನ ಅವು ನಿಶ್ಶಬ್ದವಾಗಿ ಹೋದವು. ಅದರ ಮುಂದಿರುವ ವೆಸ್ಟ್ ಮಿನ್‌ಸ್ಟರ್ ಅಬ್ಬಿಯ ಗಂಟೆಗಳು ಅದೇ ಸಮಯಕ್ಕೆ ಮೊಳಗಿ ಎರಡನೇ ಎಲಿಝಬೆತ್‌ಳ ಆಡಳಿತದ ಅಂತ್ಯವನ್ನು ಸಾರಿದವು. ಅದೇ ತಿಂಗಳ 19ರಂದು ಬಕಿಂಗ್ಹ್ಯಾಮ್ ಅರಮನೆಯಿಂದ ಹೊರಟ ಆಕೆಯ ಶವಯಾತ್ರೆ ವೆಸ್ಟ್‌ಮಿನ್‌ಸ್ಟರ್ ತಲುಪುವವರೆಗೆ ಪ್ರತಿ ನಿಮಿಷಕ್ಕೊಮ್ಮೆ ಸಂತಾಪ ಸೂಚಿಸಿ ಬಿಗ್‌ಬೆನ್ ನಾದ ಹೊರಡಿಸಿತು. ಇದೇ ವರ್ಷದ ಮೇ 6ರಂದು ಆಕೆಯ ಪುತ್ರನ ಪಟ್ಟಾಭಿಷೇಕಕ್ಕೆ ಹೊಸ ರೂಪಗಳನ್ನು ತೊಟ್ಟು ನಲಿಯಿತು.

ಇಂಗ್ಲೆಂಡ್‌ನ ಏಳುಬೀಳುಗಳಲ್ಲಿ ಬಿಗ್ ಬೆನ್ ವಹಿಸಿರುವ ಪಾತ್ರ ಬಲು ದೊಡ್ಡದು.

ಪ್ರತಿಕ್ರಿಯಿಸಿ: feedback@sudha.co.in